ಅಸಲು ದಾವಾ ಸಂಖ್ಯೆ 322/2022

ಪಿ ಡಬ್ಲ್ಯೂಃ 1 ಜೆ. ಬೈರನಾಯಕ

**ದಿನಾಂಕ : 24.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ – ಪ್ರತಿವಾದಿ 1 ಮತ್ತು 2ರವರ ಪರ ಶ್ರೀ ಡಿ ಎಸ್ ಬಿ ವಕೀಲರಿಂದಃ**

ಅನುಸೂಚಿತ ಸ್ವತ್ತಿನ ಚೆಕ್ಕು ಬಂದಿ ನನಗೆ ಗೊತ್ತು. ಪೂರ್ವಕ್ಕೆ ಪಣ್ಣೆ ದಾರಿ, ಪಶ್ಚಿಮಕ್ಕೆ ವೆಂಕಟರಮಣ ಮನೆ, ದಕ್ಷಿಣಕ್ಕೆ ವೆಂಕಮ್ಮ, ರಂಗಮ್ಮರವರು ಸ್ವಂತ ಕಟ್ಟಿಕೊಂಡಿರುವ ಮನೆ. ಉತ್ತರಕ್ಕೆ ರಸ್ತೆ. ನನ್ನ ವಾದಪತ್ರದಲ್ಲಿ ದಕ್ಷಿಣ ಭಾಗದಲ್ಲಿ ಪ್ರತಿವಾದಿಗಳ ಮನೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ದೇವಮ್ಮನವರಿಂದ ಮನೆಯನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ತೊಳಸಮ್ಮ ಮತ್ತು ರಂಗಮ್ಮನವರಿಂದ ದೇವಮ್ಮ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದರು. ಪ್ರತಿವಾದಿಗಳು ಸದರಿ ಕ್ರಯಕ್ಕೆ ಪಡೆದ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುತ್ತಾರೆ ಎಂದರೆ ಸಾಕ್ಷಿಯು ತೊಳಸಮ್ಮ ಮತ್ತು ರಂಗಮ್ಮ ಮನೆ ನಿರ್ಮಾಣ ಮಾಡಿದ್ದು ದೇವಮ್ಮರವರು ಸದರಿ ಮನೆಯನ್ನು ಪ್ರತಿವಾದಿಗಳಿಗೆ ಮಾರಾಟ ಮಾಡಿದ್ದು ಆ ಮನೆಯಲ್ಲಿ

ಪಿ ಡಬ್ಲ್ಯೂ: 1 ಜೆ. ಬೈರನಾಯಕ

ವಾಸವಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ದೇವಮ್ಮನವರಿಂದ ಕ್ರಯಕ್ಕೆ ಪಡೆದ ಸ್ವತ್ತಿಗೆ ನಮಗೆ ಸಂಬಂಧ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಪ್ರತಿವಾದಿ 6 ಮೊಳ ಇರುವ ಸ್ವತ್ತನ್ನು 12 ಮೊಳ ಎಂಬುದಾಗಿ ನಮ್ಮ ಸ್ವತ್ತನ್ನು ಸಹಾ ಸೇರಿಸಿ ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿ 6 ಮೊಳ ಇರುವ ಸ್ವತ್ತನ್ನು 12 ಮೊಳ ಎಂಬುದಾಗಿ ನಮ್ಮ ಸ್ವತ್ತನ್ನು ಸಹಾ ಸೇರಿಸಿ ಬರೆಸಿಕೊಂಡಿರುತ್ತಾರೆ ಎಂದು ನಾನು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ದೂರು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಇ–ಸ್ವತ್ತು ಮಾಡಿಸಿಕೊಡುವಂತೆ ಅರ್ಜಿ ಸಲ್ಲಿಸಿದಾಗ ನಮಗೆ ಈ ಬಗ್ಗೆ ತಿಳಿದುಬಂದಿರುತ್ತದೆ ಎಂದು ನುಡಿಯುತ್ತಾರೆ. ಆ ನಂತರ ಪಿ ಡಿ ಒ ಸ್ಥಳಕ್ಕೆ ಬಂದಿದ್ದು, ನಮ್ಮಗಳ ಸ್ವತ್ತನ್ನು ಅಳತೆ ಮಾಡಿರುವುದಿಲ್ಲ. ಪಿ ಡಿ ಒ ಅಳತೆ ಮಾಡದೇ ಇದ್ದಾಗ ಮೇಲಾಧಿಕಾರಿಗೆ ದೂರು ದಾಖಲು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ಸಲ್ಲಿಸುವ ಮೊದಲೇ ಪೊಲೀಸ್ ಠಾಣೆಗೆ ದೂರು ದಾಖಲು ಮಾಡಿದ್ದೆ. ನನ್ನ ಅಣ್ಣನ ಮಕ್ಕಳು ಪಿ ಡಿ ಒ ಹಾಗೂ ನನ್ನ ಮಗ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ ಎಂದರೆ ಸರಿ. ಹೆಚ್ಚಾಗಿ ಬರೆಸಿಕೊಂಡಿರುವ 6 ಮೊಳ ಬಿಡಿಸಿಕೊಡುವಂತೆ ನಾನು ದಾವೆ ಸಲ್ಲಿಸಿರುವುದಿಲ್ಲ.

ಪ್ರತಿವಾದಿಗಳು ಯಾವ ಸಾಲಿನಲ್ಲಿ ನಿಖರವಾಗಿ ಯಾವ ದಿನಾಂಕದಂದು ಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1984 ರಲ್ಲಿ ನಾನು ಮಹದೇವಮ್ಮರವರಿಂದ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದು ನಾನು ಸ್ವತ್ತನ್ನು ಕ್ರಯಕ್ಕೆ ಪಡೆದ 2-3 ವರ್ಷಗಳ ನಂತರ ಪ್ರತಿವಾದಿ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ಪತ್ರದಲ್ಲಿರುವ ವಿಸ್ತೀರ್ಣದಲ್ಲಿ ಅವರು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರಿರುವ ಜಾಗದಲ್ಲಿ ಅವರಿದ್ದಾರೆ ನಮ್ಮ ಜಾಗದಲ್ಲಿ ನಾವಿದ್ದೇವೆ ಎಂದು ನುಡಿಯುತ್ತಾರೆ ಪ್ರತಿವಾದಿಗಳು 1987 ನೇ ಸಾಲಿನಲ್ಲಿ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದು ನಾವಾಗಲೀ ಪ್ರತಿವಾದಿಯಾಗಲೀನಮ್ಮ ಸ್ವತ್ತಗಳನ್ನು ಅಳತೆ ಮಾಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಇ-ಸ್ವತ್ತು ಮಾಡಲು ಬಂದಾಗ ನಮಗೆ ಅದು ತಿಳಿದುಬಂದಿತು ಎಂದು ನುಡಿಯುತ್ತಾರೆ. ನಾನು ದಾವೆ ದಾಖಲು ಮಾಡಿದ ನಂತರ ಇ-ಸ್ವತ್ತು ಮಾಡಲು ಬಂದಿರುತ್ತಾರೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಹಾಗೂ ತನ್ನ ಸ್ವತ್ತಿನ ಸ್ವಾಧೀನಾನುಭವಕ್ಕೆ ಅಡ್ಡಿಯನ್ನುಂಟು ಪಡಿಸಿರುತ್ತಾರೆ ಎಂಬುದಾಗಿ ಪ್ರತಿವಾದಿ ನನ್ನ ವಿರುದ್ಧ ಅಸಲು ದಾವಾ ಸಂಖ್ಯೆ 123/2022 ನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಳತೆ ವ್ಯತ್ಯಾಸವಾಗಿರುವ ಬಗ್ಗೆ ನನ್ನ ಮೂಲ ಮಾಲೀಕರನ್ನು ನಾನು ಕೇಳಿಲ್ಲ ಎಂದರೆ ಸಾಕ್ಷಿಯು ನಾವು ಸ್ವತ್ತನ್ನು ಪಡೆಯುವ ಸಂದರ್ಭದಲ್ಲಿ ಸ್ವತ್ತನ್ನು ಅಳತೆ ಮಾಡಿಸಿ ಕ್ರಯಕ್ಕೆ ಪಡೆದಿದ್ದೆವು ಎಂದು ನುಡಿಯುತ್ತಾರೆ. ಅಳತೆಗೆ ಸಂಬಂಧ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು ಕೈಯಲ್ಲಿ ಮೊಳ ಲೆಕ್ಕದಲ್ಲಿ ಅಳತೆ ಮಾಡಿ ಕ್ರಯಕ್ಕೆ ಪಡೆದಿದ್ದೆವು ಎಂದು ನುಡಿಯುತ್ತಾರೆ. ನಾವು ಕೈಯಲ್ಲಿ ಮೊಳ ಲೆಕ್ಕದಲ್ಲಿ ಅಳತೆ ಮಾಡಿಕೊಂಡಿದ್ದ ವಿಸ್ತೀರ್ಣವನ್ನೇ ಕ್ರಯಪತ್ರದಲ್ಲಿ

ನಮೂದು ಮಾಡಲಾಗಿತ್ತು ಎಂದರೆ ಸರಿ. ಅಷ್ಟಕ್ಕೆ ಮನೆ ಕಟ್ಟಿದ್ದೀರಾ ಎಂದರೆ ಸಾಕ್ಷಿಯು ನಾನು ಕಟ್ಟಿರುವ ಮನೆಯನ್ನೇ ತೆಗೆದುಕೊಂಡಿದ್ದೆ ಎಂದು ನುಡಿಯುತ್ತಾರೆ.

ಪ್ರತಿವಾದಿಗಳ ಸ್ವತ್ತಿನ ಮೂಲ ಮಾಲೀಕರಾದ ರಂಗಮ್ಮನವರ ಸ್ವತ್ತಿನ ವಿಸ್ತೀರ್ಣನ ನನಗೆ ಗೊತ್ತಿಲ್ಲ. ನಾನು ಸ್ವತ್ತನ್ನು ಕ್ರಯಕ್ಕೆ ಪಡೆದ ನಂತರ ಯಾವುದೇ ಒತ್ತುವರಿ ಆಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಎಷ್ಟು ಸ್ವತ್ತನ್ನು ಭೌತಿಕವಾಗಿ ಕ್ರಯಕ್ಕೆ ಪಡೆದಿದ್ದೆನೋ ಅಷ್ಟೇ ಇದೆ ಎಂದು ನುಡಿಯುತ್ತಾರೆ.

ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿದಂತೆ ಕಂದಾಯ ಪಾವತಿ ರಶೀದಿ, ಡಿಮಾಂಡ್ ರಿಜಿಸ್ಟರ್ ಅಥವಾ ಖಾತೆ ದಾಖಲಾತಿ ಇದೆಯೆ ಎಂದರೆ ಸಾಕ್ಷಿಯು ನಮಗೆ ಕಂದಾಯ ಕಟ್ಟಲು ಬಿಟ್ಟಿಲ್ಲ ಹಾಗೂ ದಾಖಲೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. 1984 ರಿಂದ 2022 ನೇ ಸಾಲಿನವರಗೆ ನನ್ನ ಹೆಸರಿಗೆ ಖಾತೆ ಮಾಡಿಕೊಳ್ಳಲು ತೊಂದರೆ ಇರಲಿಲ್ಲ ಆದರೆ ನಾನು ಮಾಡಿಸಿಲ್ಲ. ನನ್ನ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಪ್ರತಿವಾದಿ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮಗಳ ಹೆಸರಿನಲ್ಲಿ ಖಾತೆ ಇರುವುದಿಲ್ಲ ಎಂದರೆ ಸರಿ. ನಾವುಗಳು ನಮ್ಮ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಒಬ್ಬರಿಗೊಬ್ಬರು ತಕರಾರು ಮಾಡಿದ ಕಾರಣ ನಮ್ಮಗಳ ಹೆಸರಿಗೆ ಖಾತೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿ. ಖಾತೆ ವರ್ಗಾವಣೆ ಆಗಿಲ್ಲ ಎಂಬ ಕಾರಣಕ್ಕಾಗಿ ಈ ದಾವೆ ದಾಖಲು ಮಾಡಿದ್ದೆ ಎಂದರೆ ಸಾಕ್ಷಿಯು ಅವರು ನನಗೆ ಬೈಯುತ್ತಿದ್ದರು ಹಾಗಾಗಿ ದಾವೆ ದಾಖಲು ಮಾಡಿದ್ದೇನೆ ಎಂದು ನುಡಿಯುತ್ತಾರೆ.

ನಮ್ಮ ನಡುವೆ ಸ್ವತ್ತಿನ ವಿಸ್ತೀರ್ಣಕ್ಕೆ ಇರುವ ತಕರಾರನ್ನು ಹೊರತು ಪಡಿಸಿ ಬೇರೆ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ. ನನ್ನ ದಾವೆಯಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿದ ಕಾರಣ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದು ಎಲ್ಲಿಯೂ ಹೇಳಿಲ್ಲ ಎಂದರೆ ಸಾಕ್ಷಿಯು ಅವರು ನನ್ನ ಸ್ವತ್ತನ್ನು ಒತ್ತುವರಿ ಮಾಡಿಲ್ಲ ಎಂದು ನುಡಿಯುತ್ತಾರೆ.

ದಿನಾಂಕಃ 08.10.2022 ರಂದು ಈ ದಾವೆಯನ್ನು ದಾಖಲು ಮಾಡುವ ಸಂಬಂಧ ಯಾವುದೇ ಘಟನೆ ನಡೆದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ ಹಾಗೂ ಅವರ ಹೆಂಡತಿ ನಮ್ಮನ್ನು ಬೈಯುತ್ತಿದ್ದರು ಎಂದು ನುಡಿಯುತ್ತಾರೆ. ದಿನಾಂಕಃ 08.10.2022 ರಂದು ಪ್ರತಿವಾದಿ ಮತ್ತು ಅವರ ಹೆಂಡತಿ ನಮ್ಮನ್ನು ಬೈದದ್ದನ್ನು ಹೊರತು ಪಡಿಸಿ ಬೇರೆ ಕಾರಣ ಇಲ್ಲ ಎಂದರೆ ಸಾಕ್ಷಿಯು ಗೋಡೆ ಹಾಕಲು ಬಂದಾಗ ತಕರಾರು ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಗೋಡೆ ನಿರ್ಮಾಣ ಮಾಡಲು ಹೋದಾಗ ತಕರಾರು ಮಾಡಿರುತ್ತಾರೆ ಎಂಬುದಾಗಿ ಇದೇ ಮೊದಲ ಬಾರಿ ಹೇಳುತ್ತಿರುತ್ತೇನೆ ಎಂದರೆ ಸಾಕ್ಷಿಯು ದಾವೆ ದಾಖಲು ಮಾಡುವಾಗಲೇ ಹೇಳಿದ್ದೆ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನನ್ನ ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ನನ್ನ ವಕೀಲರಿಗೆ ಹೇಳಿದ್ದೆ ಎಂದು ನುಡಿಯುತ್ತಾರೆ.

ದಾವಾ ಅನುಸೂಚಿತ ಸ್ವತ್ತಿನ ಮೂಲ ಮಾಲೀಕರ ಹೆಸರಿಗೆ ಖಾತೆ ಇದ್ದ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಕೊಟ್ಟಿರುವುದಿಲ್ಲ. ಮಹದೇವಮ್ಮರವರ ಹೆಸರಿಗೆ ಖಾತೆ ಇದ್ದ ಬಗ್ಗೆ ನಾನು

ಅಸಲು ದಾವಾ ಸಂಖ್ಯೆ 322/2022

ಪಿ ಡಬ್ಲ್ಯೂ: 1 ಜೆ. ಬೈರನಾಯಕ

ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಕೊಟ್ಟಿರುವುದಿಲ್ಲ. ಸಾಕ್ಷಿಯು ಮುಂದುರೆದು ನಾನು ಅವರಿಂದ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ಕ್ರಯಕ್ಕೆ ಪೂರ್ವದಲ್ಲಿ ಅಥವಾ ಕ್ರಯಕ್ಕೆ ಪಡೆದ ನಂತರ ಅವರ ಹೆಸರಿನಲ್ಲಿ ಖಾತೆ ನಮೂದಾಗಿತ್ತೋ ಇಲ್ಲವೋ ನಾನು ಪರಿಶೀಲನೆ ಮಾಡಿರುವುದಿಲ್ಲ. ಈ ದಾವೆ ದಾಖಲು ಮಾಡಿದ ನಂತರವಾಗಲೀ ನಾನು ಪರಿಶೀಲನೆ ಮಾಡಿರುವುದಿಲ್ಲ. ಈ ದಾವಾ ಸ್ವತ್ತು ಮೂಲ ಮಾಲೀಕರಾದ ರಂಗಮ್ಮರವರಿಗಾಗಲೀ ಅವರಿಂದ ಕ್ರಯಕ್ಕೆ ಪಡೆದ ಮಹಾದೇವಮ್ಮರವರ ಹೆಸರಿಗಾಗಲೀ ಅಥವಾ ನನ್ನ ಹೆಸರಿಗಾಗಲೀ ಖಾತೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸದರಿ ಸ್ವತ್ತು ರಂಗಮ್ಮರವರ ಪಿತ್ರಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ರಂಗಮ್ಮರವರ ಪಿತ್ರಾರ್ಜಿತ ಸ್ವತು ಎಂದು ಹೇಳುವ ಯಾವುದೇ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ ಹಾಗೂ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

ನಾನು ತಿಳಿಸಿದಂತೆ ನನ್ನ ಮಾಲೀಕತ್ವಕ್ಕೆ ಸೇರಿದ ಸ್ವತ್ತಿನಲ್ಲಿ 6 ಮೊಳ ಸ್ವತ್ತನ್ನು ಪ್ರತಿವಾದಿ ಹೊಂದಿರುತ್ತಾರೆ ಎಂಬುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ಕ್ರಯಕ್ಕೆ ಪಡೆದ ಸಂದರ್ಭದಲ್ಲಿ ಕ್ರಯಪತ್ರದಲ್ಲಿ ನಮೂದಾಗಿರುವ ವಿಸ್ತೀರ್ಣದಲ್ಲಿ ನಾವುಗಳು ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿ ಹೆಚ್ಚು ವಿಸ್ತೀರ್ಣವನ್ನು ತಮ್ಮ ಹೆಸರಿಗೆ ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ರಂಗಮ್ಮ ಉಳಿಸಿಕೊಂಡಿದ್ದ ಸ್ವತ್ತನ್ನು ಪ್ರತಿವಾದಿ ಬರೆಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರಿಗೆ ಆ ಸಮಯದಲ್ಲಿ ಇದ್ದದ್ದು ಕೇವಲ 6 ಮೊಳ ಆದರೆ ವಿಸ್ತೀರ್ಣವನ್ನು ತಪ್ಪಾಗಿ ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ರಂಗಮ್ಮರವರಿಗೆ ಕೇವಲ 6 ಮೊಳ್ಳ ಸ್ವತ್ತು ಮಾತ್ರ ಉಳಿದುಕೊಂಡಿರುತ್ತದೆ ಎಂದು ನಮ್ಮ ಪತ್ರದಲ್ಲಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯ ಪತ್ರದಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ. ನಮಗೆ ಸ್ವತ್ತನ್ನು ಮಾರಾಟ ಮಾಡಿದ ನಂತರ ರಂಗಮ್ಮರವರಿಗೆ ಉಳಿದ ಸ್ವತ್ತಿನ ವಿಸ್ತೀರ್ಣವನ್ನು ಅಳತೆ ಮಾಡಿಸಿಲ್ಲ ಎಂದರೆ ಸಾಕ್ಷಿಯು ಅದನ್ನು ಅಳತೆ ಮಾಡಿಸುವ ಅವಶ್ಯಕತೆ ನಮಗೆ ಇರಲಿಲ್ಲ ಎಂದು

ನುಡಿಯುತ್ತಾರೆ. ನನಗೆ ಸ್ವತ್ತನ್ನು ಕ್ರಯಕ್ಕೆ ಕೊಟ್ಟ ನಂತರ ರಂಗಮ್ಮನವರಿಗೆ ನಿಖರವಾಗಿ ಎಷ್ಟು ಸ್ವತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅದೇ ರೀತಿ ರಂಗಮ್ಮನವರಿಗೆ ಒಟ್ಟು ಸ್ವತ್ತು ಎಂದು ಸಹಾ ನನಗೆ ಗೊತ್ತಿಲ್ಲ ಎಂದರೆ ಸರಿ. ನಮ್ಮ ಸ್ವತ್ತಿನ ದಕ್ಷಿಣ ಭಾಗದಲ್ಲಿರುವ ಪ್ರತಿವಾದಿಯ ಸ್ವತ್ತಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ